‘ಚೆನ್ನಾಗಿರುವುದಾ? ಹ್ಞಾ, ಎಲ್ಲವೂ ಸರಿಯಾಗಿಯೇ ಇದೆ, ಏಕೆ?’

‘ಯಾವುದೇ ರೀತಿ ಕೆಟ್ಟ ಪರಿಣಾಮಗಳಾಗುತ್ತಿಲ್ಲವೇ? ಒಳ್ಳೆಯದೇ ಬಿಡು.’

‘ಕೆಟ್ಟ ಪರಿಣಾಮಗಳಾ? ಯಾವುದರಿಂದ?’

‘ಬಟ್ಟೆ ಸೋಡಾದಿಂದ.’

ಹ್ಯಾರಿಸನ್ ಕೂಡಲೇ ಮೇಲೆದ್ದು ನಿಂತ. ‘ಬಟ್ಟೆ ಸೋಡನಾ? ನೀನು ಹೇಳುತ್ತಿರುವುದೇನು?’

ಪ್ವರೊ ಕ್ಷಮೆಯಾಚಿಸುವವನಂತೆ ಮುಖ ಮಾಡಿ ಹೇಳಿದ. ‘ನಾನೇ ಆ ಸೋಡವನ್ನು ನಿನ್ನ ಜೇಬಿನಲ್ಲಿ ಇಟ್ಟಿದ್ದೆ, ಕ್ಷಮಿಸು.’

‘ನನ್ನ ಜೇಬಿನಲ್ಲಿ ಇಟ್ಟೆ? ಯಾಕೆ? ಅದರ ಉದ್ದೇಶವೇನು?’

ಹ್ಯಾರಿಸನ್ ಅವನ ಕಡೆ ಎವೆಯಿಕ್ಕದೆ ನೋಡಿದ. ಉಪನ್ಯಾಸಕನೊಬ್ಬ ಸಣ್ಣ ಮಗುವಿನ ಮಟ್ಟಕ್ಕೆ ಇಳಿದು ಮಾತನಾಡುವಂತೆ ಶಾಂತ ರೀತಿಯಲ್ಲಿ ಆದರೆ, ಪರೋಕ್ಷವಾಗಿ ಪ್ವರೊ ಹೇಳಿದ. ‘ನೋಡು, ಪತ್ತೇದಾರನಾಗಿರುವುದರ ಒಂದು ಅನುಕೂಲ ಅಥವಾ ಅನನುಕೂಲವೆಂದರೆ, ಇದರಿಂದ ನಮಗೆ ಅಪರಾಧಿಗಳ ಸಂಪರ್ಕ ಬೆಳೆಯುತ್ತದೆ. ಈ ಅಪರಾಧಿಗಳು ಎಷ್ಟೋ ಕುತೂಹಲಕಾರಿ ವಿಷಯಗಳನ್ನು ನಮಗೆ ತಿಳಿಸಿಕೊಡಬಲ್ಲರು. ಒಮ್ಮೆ ಜೇಬುಗಳ್ಳನೊಬ್ಬ ನನ್ನ ಗಮನಕ್ಕೆ ಬಂದ. ಬೇರೆಯವರು ದೂರುವಂತಹ ಕೆಲಸ ಅವನು ಮಾಡಿರಲಿಲ್ಲ. ಹಾಗಾಗಿ ಅವನು ಜೈಲಿಗೆ ಹೊಗುವುದನ್ನು ನಾನು ತಪ್ಪಿಸಿದೆ. ಅದಕ್ಕೆ ಅವನದೇ ಆದ ರೀತಿಯಲ್ಲಿ ನನಗವನು ಕೃತಜ್ಞತೆಗಳನ್ನರ್ಪಿಸಿದ. ಅದೇನೆಂದರೆ ಅವನ ಕಸುಬಿನ ತಂತ್ರಗಳನ್ನು ನನಗೆ ತೋರಿಸಿಕೊಟ್ಟ. ಅಂದರೆ, ನನಗೆ ಬೇಕಾದಾಗ, ವ್ಯಕ್ತಿಯೊಬ್ಬನಿಗೆ ಸ್ವಲ್ಪವೂ ಸಂಶಯ ಬರದ ಹಾಗೆ ಅವನ ಜೇಬಿನಲ್ಲಿರುವುದನ್ನು ಕದಿಯಬಲ್ಲೆ. ನನ್ನ ಒಂದು ಕೈಯನ್ನು ಅವನ ಭುಜದ ಮೇಲಿಟ್ಟು ಭಾವಾವೇಶದಿಂದ ಮಾತನಾಡುತ್ತೇನೆ. ಹಾಗಾಗಿ ಅವನಿಗೆ ದಿಕ್ಕು ತೋಚದಂತಾಗುತ್ತದೆ. ಆಗ ಅವನ ಜೇಬಿನಲ್ಲಿದ್ದುದನ್ನು ನನ್ನ ಜೇಬಿಗೆ ವರ್ಗಾಯಿಸಿ, ಅದರ ಜಾಗದಲ್ಲಿ ಬಟ್ಟೆ ಸೋಡ ಇಡಬಲ್ಲೆ.’

**‘ಕ್ಲಾಡ್ ಲ್ಯಾಂಗ್ಟನ್ ಮತ್ತು ಮೊಲಿ ಡೀನ್ ಜೊತೆಗಿರುವುದನ್ನು ಒಮ್ಮೆ ನೋಡಿದ್ದೆ. ಅವರನ್ನು ಬೇರ್ಪಡಿಸಿ ನಿನ್ನ ತೋಳ ತೆಕ್ಕೆಯೊಳಗೆ ಅವಳನ್ನು ತಂದುಬಿಟ್ಟ ಆ ಪ್ರೇಮಿಗಳ ಜಗಳ ಎಂತಹುದೆಂದು ನನಗೆ ಗೊತ್ತಿಲ್ಲ. ಆದರೆ, ಅವರ ನಡುವಿನ ಮನಸ್ತಾಪ ಕರಗಿ, ಈಗ ಮಿಸ್ ಡೀನ್ ತನ್ನ ಪ್ರಿಯತಮನ ಕಡೆ ವಾಲುತ್ತಿದ್ದಾಳೆ ಎಂದು ಆದರಿಂದ ನನಗೆ ಮನವರಿಕೆಯಾಯಿತು.’**

ಪ್ವರೊ ಶಾಂತಭಾವದಲ್ಲಿ ಮುಂದುವರಿಸಿದ. ‘ಒಬ್ಬ ಇನ್ನೊಬ್ಬನ ಗಮನಕ್ಕೆ ಬಾರದ ಹಾಗೆ, ಅವನ ಕುಡಿಯುವ ಲೋಟದಲ್ಲಿ ವಿಷವನ್ನು ಜಾರಿಸುವುದಾದರೆ, ಅವನು ತನ್ನ ಕೋಟಿನ ಬಲಗಡೆ ಜೇಬಿನಲ್ಲಿ ಬಿಟ್ಟು ಬೇರೆಲ್ಲೂ ಇಟ್ಟುಕೊಂಡಿರಲು ಸಾಧ್ಯವಿಲ್ಲ. ಅದು ಅಲ್ಲಿರುತ್ತದೆ